(ಇಂದು ದಿನಾಂಕ 10-06-2022 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**<u>ಪಾಟೀ ಸವಾಲು – 1 ರಿಂದ 3 ನೇ ಪ್ರತಿವಾದಿ ಪರ ಶ್ರೀ ಎಂ.ಟಿ.ಎಚ್. ವಕೀಲರಿಂದ–</u>**

ದಾವೆಯ 1 ನೇ ಪ್ರತಿವಾದಿ ನನ್ನ ತಾಯಿ ಹಾಗೂ 3 ನೇ ಪ್ರತಿವಾದಿ ನನ್ನ ಸಹೋದರ ಎಂದರೆ ಸರಿ. ನಾನು, 1 ಮತ್ತು 3 ನೇ ಪ್ರತಿವಾದಿಯರು ಗೋಕರ್ಣದಲ್ಲಿ ವಾಸ ಮಾಡುತ್ತೇವೆ ಎಂದರೆ ಸರಿ. ಪ್ರಸ್ತುತ ದಾವೆಯ ವಾದಿ, 1 ಹಾಗೂ 4 ರಿಂದ 7 ನೇ ಪ್ರತಿವಾದಿಗಳು ತಮ್ಮ ಗಂಡನ ಮನೆಯಲ್ಲಿ ವಾಸ್ತವ್ಯ ಮಾಡಿಕೊಂಡು ಬಂದಿರುತ್ತಾರೆ ಎಂದರೆ ಸರಿ.

ವಾದಿಗೆ ದಾವಾ ಸ್ವತ್ತುಗಳಿಗೆ ಸಂಬಂಧಪಟ್ಟಂತಹ ವ್ಯವಹರಣೆಗಳ ಬಗ್ಗೆ ಮಾಹಿತಿ ಇದೆ ಎಂದರೆ ಸರಿ. ಮೂ. ದಾ. ನಂ. 96/1991 ರಲ್ಲಿ ನನಗೆ ಮತ್ತು ನನ್ನ ಇತರ ಸಹೋದರ ಮತ್ತು ಸಹೋದರಿಯರಿಗೆ ನ್ಯಾಯಾಲಯದಿಂದ ಸಮನ್ಸ ಬಂದಿತ್ತು ಎಂದರೆ ಸರಿ. ಸದರಿ ದಾವೆಯಲ್ಲಿ ನಾನು ವಕೀಲರನ್ನು ನೇಮಕ ಮಾಡಿಕೊಂಡು ಹಾಜರಾಗಿರಲಿಲ್ಲ. ಸದರಿ ದಾವೆಯಲ್ಲಿ ಆದಂತಹ ತೀರ್ಪಿನ ವಿರುದ್ಧ ಸಲ್ಲಿಸಲಾದ ಮೇಲ್ಮನವಿ ಸಂಖ್ಯೆ 145/2006 ರಲ್ಲಿ ನಾನಾಗಲೀ ನನ್ನ ಇತರ ಸಹೋದರ ಮತ್ತು ಸಹೋದರಿಯರಾಗಲೀ ಹಾಜರಾಗಿರುವುದಿಲ್ಲ ಎಂದರೆ ಸರಿ.

ಕುಟುಂಬದ ಸ್ವತ್ತುಗಳಿಗೆ ಸಂಬಂಧಪಟ್ಟಂತೆ ವಾಂಟಣಿಯನ್ನು ಕೋರಿ ಅಸಲು ದಾವಾ ಸಂಖ್ಯೆ 97/2012 ರಲ್ಲಿ ನಾನಾಗಲೀ ನನ್ನ ಸಹೋದರ ಮತ್ತು ಸಹೋದರಿಯರಾಗಲೀ ಹಾಜರಾಗಿರುವುದಿಲ್ಲ

ಎಂದರೆ ಸರಿ. ಸದರಿ ದಾವೆಯಲ್ಲಿ ಆದಂತಹ ತೀರ್ಪಿನ ವಿರುದ್ಧ ಸಲ್ಲಿಸಲಾದ ಮೇಲ್ಮನವಿ ಸಂಖ್ಯೆ 11/2016 ರಲ್ಲಿ ನಾನಾಗಲೀ ನನ್ನ ಇತರ ಸಹೋದರ ಮತ್ತು ಸಹೋದರಿಯರಾಗಲೀ ಹಾಜರಾಗಿರುವುದಿಲ್ಲ ಎಂದರೆ ಸರಿ. ಮೇಲೆ ಹೇಳಲಾದಂತಹ ದಾವೆಗಳು ಪ್ರಸ್ತುತ ದಾವೆಯ ವಸ್ತು ವಿಷಯಕ್ಕೆ ಸಂಬಂಧಪಟ್ಟಂತಹ ದಾವೆಗಳೇ ಆಗಿರುತ್ತದೆ ಎಂದರೆ ಸರಿ. ಮೇಲೆ ತಿಳಿಸಿದಂತಹ ದಾವೆಗಳಲ್ಲಿ ಆದಂತಹ ಖರ್ಚು ವೆಚ್ಚಗಳನ್ನು 3 ನೇ ಪ್ರತಿವಾದಿಯೇ ಭರಣ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಅವರಿಗೆ ಅವಶ್ಯಕತೆ ಇದ್ದಿದ್ದರಿಂದ ಖರ್ಚು ಮಾಡಿರುತ್ತಾರೆ, ಆದರೆ ನಮ್ಮ ಪರವಾಗಿ ಖರ್ಚು ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ.

**(ಈ ಹಂತದಲ್ಲಿ 1 ರಿಂದ 3 ನೇ ಪ್ರತಿವಾದಿ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ನೀಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಪ್ರಧಾನ ಸಿವಿಲ್ ಜಡ್ಜ, ಕುಮಟಾ